# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ : 12-12-2022

ಬೀದರ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 84/2022 ಕಲ 379 ಐಪಿಸಿ :-

ದಿನಾಂಕ 11/12/2022 ರಂದು 1245 ಗಂಟೆಗೆ ಕಂಟೆಪ್ಪಾ ತಂದೆ ಸಿದ್ರಾಮಪ್ಪಾ ಹೊನ್ನಾ ವಯ- 75 ವರ್ಷ ಜಾ|| ಲಿಂಗಾಯತ ಉ|| ಒಕ್ಕಲುತನ ಸಾ|| ಗಾದಗಿ ಸದ್ಯ ಹಳೆ ಆದರ್ಶ ಕಾಲೋನಿ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ ಇವರ ಹೋಲ ಸರ್ವೆ ನಂ 164/3/1 ನೇದರಲ್ಲಿ ಒಂದು ಬಾವಿ ಇದ್ದು ನಮ್ಮ ಬಾವಿಗೆ ಒಂದು 5 ಎಚ್.ಪಿ ಸಬ್ ಮರ್ಸಿಬಲ್ ಮೋಟಾರ ಮತ್ತು ಕೇಬಲ್ ಅಳವಡಿಸಿದ್ದು ಇದ್ದು ಅದರ ಅಂ ಕೀ 15000/- ಇರುತ್ತದೆ. ದಿನಾಂಕ 29,30/11/2022 ರ ರಾತ್ರಿ ವೇಳೆಯಲ್ಲಿ ಯಾರೋ ಅಪರಿಚಿತ ಕಳ್ಳರು ಹೋಲದ ಬಾವಿಗೆ ಅಳವಡಿಸಿದ ಒಂದು 5 ಎಚ್.ಪಿ ಸಬ್ ಮರ್ಸಿಬಲ್ ಮೋಟಾರ ಮತ್ತು ಕೇಬಲ್ ನೇದನ್ನು ಕಳುವು ಮಾಡಿಕೊಂಡು ಹೋಗಿದ್ದು ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಬೀದರ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 86/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ 11/12/2022 ರಂದು ಪಿಎಸ್ಐ ರವರು ಸಾಯಾಂಕಾಲ 7.30 ಗಂಟೆಯ ಸುಮಾರಿಗೆ ಠಾಣೆಯಲ್ಲಿದ್ದಾಗ ಸಿಕಿಂದ್ರಾಪೂರ ಗ್ರಾಮದಲ್ಲಿ ಕೆಲವು ಜನರು ಇಸ್ಪೀಟ ಎಲೆಗಳ ಮೇಲೆ ಹಣ ಹಚ್ಚಿ ಅಂದರ ಬಾಹರ ಜುಜಾಟ ಆಡುತಿದ್ದಾರೆ ಅಂತ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊAದಿಗೆ ಹೋಗಿ ನೋಡಿದಾಗ ಸಿಕಿಂದ್ರಾಪೂರ ಗ್ರಾಮದ ಬಸವೇಶ್ವರ ಚೌಕ ಹತ್ತಿರ ಸ್ವಲ್ಪ ದೂರದಲ್ಲಿ ಮರೆಯಲ್ಲಿ ನಿಂತು ನೋಡಲಾಗಿ ರಸ್ತಯ ಪಕ್ಕದಲ್ಲಿ ಬೀದಿ ಲೈಟಿನ ಬೆಳಕಿನಲ್ಲಿ 5 ಜನರು ಇಸ್ಪೀಟ ಎಲೆಗಳ ಮೇಲೆ ಹಣ ಹಚ್ಚಿ ಅಂದರ ಬಾಹರ ಜುಜಾಟ ಆಡುತಿದ್ದನ್ನು ನೋಡಿ ಖಚಿತ ಪಡಿಸಿಕೊಂಡು ದಾಳಿ ಮಾಡಿ ಜುಜಾಟ ಆಡುತಿದ್ದ 5 ಜನರನ್ನು ಅಲ್ಲೆ ಹಿಡಿದಿದ್ದು ಸದರಿಯವರ ಹೆಸರು ವಿಳಾಸ ಕೇಳಲು ಅವರು ತಮ್ಮ ಹೆಸರು 1) ಅನಿಲಕುಮಾರ ತಂದೆ ಅಂಬಣ್ಣಾ ಜೊತಿ ವಯ 26 ವರ್ಷ ಜಾ : ಎಸ್.ಸಿ ಉ|| ಕೂಲಿಕೆಲಸ 2) ಶಾಲಿವಾನ ತಂದೆ ಬಾಬುರಾವ ಘೊಡಲೆ ವಯ 22 ವರ್ಷ ಜಾ|| ಎಸ್.ಸಿ ಉ|| ಕೂಲಿಕೆಲಸ 3) ಆನಂದ ತಂದೆ ಶಿವರಾಜ ಬೆಲ್ದಾರ ವಯ-23 ವರ್ಷ ಜಾ : ಎಸ್.ಸಿ ಉ : ವಿದ್ಯಾರ್ಥಿ 4) ಕ್ರಾಂತಿಕುಮಾರ ತಂದೆ ಬಸವರಾಜ ಗುಡುರೆ ವಯ 31 ವರ್ಷ ಜಾ : ಎಸ್.ಸಿ ಉ : ವಿದ್ಯಾರ್ಥಿ 5) ಆಕಾಶ ತಂದೆ ನಾಗಪ್ಪಾ ಹಾರೂರಕರ ವಯ 25 ವರ್ಷ ಜಾ : ಎಸ್.ಸಿ ಎಲ್ಲರು ಸಾ : ಸಿಕಿಂದ್ರಾಪೂರ ಅಂತ ತಿಳಿಸಿದರು. ಮತ್ತು ಸ್ಥಳದಲ್ಲಿ ಪರೀಶಿಲನೆ ಮಾಡಲು ಅಲ್ಲಿ ಜುಜಾಟದಲ್ಲಿ ಎಲ್ಲರ ಮುಂದೆ ಒಂದು ಪೇಪರ ಮೇಲೆ 500/- ರೂಪಾಯಿಯ 14 ನೋಟು, 100/- ರೂಪಾಯಿಯ 2 ನೋಟು ಹೀಗೆ ಒಟ್ಟು 7200/- ರೂ ಮತ್ತು 52 ಇಸ್ಪೀಟ ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಸಂತಪೂರ ಪೊಲೀಸ್ ಠಾಣೆ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 126/2022 ಕಲಂ 87 ಕೆಪಿ ಕಾಯ್ದೆ ;-

ದಿನಾಂಕ : 11/12/2022 ರಂದು ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಜೈಭಾನಿ ಧಾಬಾದ ಹಿಂದೆ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಸೇರಿ ಅಕ್ರಮ ಜೂಜಾಟದಲ್ಲಿ ತೊಡಗಿದ್ದಾರೆ ಎಂದು ಮಾಹಿತಿ ಬಂದಿದ ಮೇರೆಗೆ ಸಿಬ್ಬಂದಿಯೊAದಿಗೆ ವಡಗಾಂವ- ಸಂತಪೂರ ರೋಡಿನ ಸಂತಪೂರ ಕಡೆಗೆ ಹೋಗುವ ರೋಡಿನ ಪಕ್ಕದಲ್ಲಿ ಜೀಪನು ನಿಲ್ಲಿಸಿ ಜೈಭವಾನಿ ಧಾಬಾದ ಹತ್ತಿರ ಹೋಗಿ ಮರೆಯಾಗಿ ನೋಡಲಾಗಿ ಧಬಾದ ಹಿಂದೆ ಸಾರ್ವಜನಿಕ ಸ್ಥಳದಲ್ಲಿ ಸುಮಾರು 5 ಜನರು ಗುಂಪು ಕಟ್ಟಿಕೊಂಡು ಗೊಲಾಗಿ ಕುಳಿತು ಇಸ್ಪೇಟ ಎಲೆಗಳಿಂದ ಹಣ ಹಚ್ಚಿ ಪಣ ತೊಟ್ಟು ಅಂದರ ಬಾಹರ ಅನ್ನುವ ಜೂಜಾಟ ಅಡುತಿದ್ದರು ಅದನ್ನು ನೋಡಿ ಖಚಿತ ಪಡಿಸಿಕೊಂಡು, ಪಂಚರ ಸಮಕ್ಷಮ ಸದರಿ ಜನರ ಮೇಲೆ 1145 ಗಂಟೆಗೆ ಸಿಬ್ಬಂದಿ ಜನರ ಸಹಾಯದಿಂದ ದಾಳಿ ಮಾಡಿದಾಗ 5 ಜನರಿಗೆ ಹಿಡಿದು ಹೆಸರು ವಿಳಾಸ ವಿಚಾರಿಸಿ ಅಂಗ ಜಡ್ತಿ ಮಾಡಿ ಪರಿಶಿಲಿಸಿದಾಗ 1] ಸುನೀಲ ತಂದೆ ಜೈವಂತ ಪಿಟೇ ವ, 26 ವರ್ಷ ಉ/ ಡ್ರೈÊವರ ಸಾ/ ವಡಗಾಂವ ಇತನ ಅಂಗ ಜಡ್ತಿ ಮಾಡಿದಾಗ ಅವನ ಹತ್ತಿರ 800/-ರೂ ಗಳು 2) ಗೌತಮ ತಂದೆ ವೈಜಿನಾಥ ಅಡಕೆ ವ. 31 ವರ್ಷ ಉ/ ಡ್ರೈÊವರ ಸಾ/ ವಡಗಾಂವ ಇತನ ಅಂಗ ಜಡ್ತಿ ಮಾಡಿದಾಗ ಅವನ ಹತ್ತಿರ 700/-ರೂ ಗಳು 3) ಗೌತಮ ತಂದೆ ರಘುನಾಥ ಸೋಮುರೆ ವ. 50 ವರ್ಷ ಉ/ ಕೂಲಿ ಸಾ/ ವಡಗಾಂವ ಇತನ ಅಂಗ ಜಡ್ತಿ ಮಾಡಿದಾಗ ಅವನ ಹತ್ತಿರ 800/-ರೂ ಗಳು 4) ದೀಲಿಪ ತಂದೆ ರುಪಸಿಂಗ ರಜಪೂರ ವ, 44 ವರ್ಷ ಸಾ/ ವಡಗಾಂವ ಇತನ ಅಂಗ ಜಡ್ತಿ ಮಾಡಿದಾಗ ಅವನ ಹತ್ತಿರ 900/-ರೂ ಗಳು 5) ಯಸುದಾಸ ತಂದೆ ಶಂಕರ ಭೂರೆ ವ, 40 ವರ್ಷ ಉ/ ಕೂಲಿ ಸಾ/ ವಡಗಾಂವ ಇತನ ಅಂಗ ಜಡ್ತಿ ಮಾಡಿದಾಗ ಅವನ ಹತ್ತಿರ.800 /-ರೂ ಗಳು ಇದ್ದು ಹಾಗೂ ಎಲ್ಲರು ಮದ್ಯ ಇದ್ದÀ ಸ್ಥಳವನ್ನು ಪರಿಶಿಲಿಸಿ ನೋಡಲು ಹೀಗೆ ಒಟ್ಟು 52 ಇಸ್ಪೇಟ ಎಲೆಗಳು ಹಣ 250 /-ರೂಗಳು ಇದ್ದು ಹೀಗೆ ಒಟ್ಟು ನಗದು ರೂ 4250-/ ನಗದು ಹಾಗೂ 52 ಇಸ್ಪೇಟ ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ